# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ :** ರಾಜ್ಯದಲ್ಲಿ ಅತ್ಯಾವಶ್ಯಕವಿರುವ ಕಡೆಗಳಲ್ಲಿ 2007-08ನೇ ಶೈಕ್ಷಣಿಕ ಸಾಲಿನಿಂದ ಹೊಸ ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ಮಂಜೂರು ಮಾಡುವ ಬಗ್ಗೆ.

**ಓದಲಾಗಿದೆ :** (1) 2007-08ನೇ ಸಾಲಿನ ಆಯವ್ಯಯದ ಭಾಷಣದಲ್ಲಿ 100 ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಇರುವ ಪ್ರಸ್ತಾಪ.

*****

**ಪ್ರಸ್ತಾವನೆ :**

ರಾಜ್ಯದ 2007-08ನೇ ಸಾಲಿನ ಆಯವ್ಯಯದ ಭಾಷಣದಲ್ಲಿ ರಾಜ್ಯದಲ್ಲಿ ಅತ್ಯಾವಶ್ಯಕವಿರುವ ಕಡೆ 100 ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಪ್ರಸ್ತಾಪಿಸಲಾಗಿದೆ. ಅದರಂತೆ ಮೈಸೂರು ವಿಭಾಗದ ಚಾಮರಾಜನಗರ ಜಿಲ್ಲೆಯಲ್ಲಿ ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಗ್ರಾಮಾಂತರ ವಿದ್ಯಾರ್ಥಿಗಳು ಪದವಿ ಪೂರ್ವ ತರಗತಿಗಳಿಗಾಗಿ ದೂರದ ಪ್ರದೇಶಗಳಿಗೆ ಹೋಗುತ್ತಿರುವುದನ್ನು ಗಮನಿಸಿ, ಅಗತ್ಯಾನುಸಾರ ಪದವಿ ಪೂರ್ವ ಶಿಕ್ಷಣವನ್ನು ಒದಗಿಸುವ ದೃಷ್ಟಿಯಿಂದ, ಹಾಗೂ ಡಾ: ನಂಜುಂಡಪ್ಪನವರ ವರದಿಯನ್ವಯ ಶೈಕ್ಷಣಿಕವಾಗಿ ಹಿಂದುಳಿದಿರುವುದನ್ನು ಗಣನೆಗೆ ತೆಗೆದುಕೊಂಡು ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಇಡಿ 97 ಎಸ್‌ಹೆಚ್‌ಹೆಚ್ 2007**
**ಬೆಂಗಳೂರು, ದಿನಾಂಕ 25ನೇ ಮೇ 2007.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಸನ್ನಿವೇಶದಲ್ಲಿ 2007-08ನೇ ಸಾಲಿನಿಂದ ಚಾಮರಾಜನಗರ ಜಿಲ್ಲೆಯ ಕೆಳಕಂಡ ಸ್ಥಳಗಳಲ್ಲಿ ಸರ್ಕಾರಿ ಸಂಯುಕ್ತ/ಸ್ವತಂತ್ರ ಪದವಿ ಪೂರ್ವ ಕಾಲೇಜುಗಳನ್ನು ಕಲಾ ಮತ್ತು ವಾಣಿಜ್ಯ ವಿಭಾಗಗಳೊಂದಿಗೆ ಕೆಳಗೆ ಸೂಚಿಸಿರುವ ಷರತ್ತುಗಳಿಗೆ ಒಳಪಟ್ಟು ಪ್ರಾರಂಭಿಸಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

1) ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜು, ಸಂತೇಮರಹಳ್ಳಿ, ಯಳಂದೂರು ತಾಲ್ಲೂಕು.
2) ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜು, ಅಮಚವಾಡಿ, ಚಾಮರಾಜನಗರ ತಾಲ್ಲೂಕು.
3) ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜು, ಆಲೂರು, ಚಾಮರಾಜನಗರ ತಾಲ್ಲೂಕು.

**-: ಷರತ್ತುಗಳು :-**

(1) ಮೇಲೆ ಸೂಚಿಸಿರುವ ಸ್ಥಳಗಳಲ್ಲಿ ಸರ್ಕಾರಿ ಪ್ರೌಢಶಾಲೆಗಳಿದ್ದು, ಇದನ್ನು ಉನ್ನತೀಕರಿಸಿ ಸಂಯುಕ್ತ ಪದವಿ ಪೂರ್ವ ಕಾಲೇಜೆಂದು ಪರಿಗಣಿಸಲಾಗಿದೆ.

(2) ಮೇಲೆ ಸೂಚಿಸಿರುವ ಸ್ಥಳಗಳಲ್ಲಿ ಸರ್ಕಾರಿ ಪ್ರೌಢಶಾಲೆಗಳು ಇಲ್ಲದೇ ಇದ್ದಲ್ಲಿ ಸ್ವತಂತ್ರ ಪದವಿ ಪೂರ್ವ ಕಾಲೇಜೆಂದು ಪರಿಗಣಿಸುವುದು.

(3) ಸರ್ಕಾರಿ ಪ್ರೌಢಶಾಲೆಗಳನ್ನು ಉನ್ನತೀಕರಿಸಿ ಸಂಯುಕ್ತ ಪದವಿ ಪೂರ್ವ ಕಾಲೇಜನ್ನು ಮಂಜೂರು ಮಾಡಿರುವ ಸ್ಥಳಗಳಲ್ಲಿ ಸ್ಟಾಫಿಂಗ್ ಪ್ಯಾಟರ್ನ್ ಪ್ರಕಾರ ಮುಖ್ಯ ಶಿಕ್ಷಕರ ಹುದ್ದೆಗಳು ಇಲ್ಲದಿರುವುದರಿಂದ ಸರ್ಕಾರಿ ಪ್ರೌಢಶಾಲೆಗಳಲ್ಲಿರುವ ಮುಖ್ಯ ಶಿಕ್ಷಕರ ಹುದ್ದೆಗಳನ್ನು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರು ಹಿಂದಕ್ಕೆ ಪಡೆದು ಇವರನ್ನು ಅಗತ್ಯವಿರುವ ಕಡೆ ಹುದ್ದೆ ಸಮೇತ ಸ್ಥಳಾಂತರಿಸುವ ಬಗ್ಗೆ ಆಯುಕ್ತರು, ಪದವಿ ಪೂರ್ವ ಶಿಕ್ಷಣ ಇಲಾಖೆಯವರೊಡನೆ ಸಮಾಲೋಚಿಸಿ ಆಯುಕ್ತಾಲಯಗಳ ಹಂತದಲ್ಲಿ ಅಗತ್ಯ ಕ್ರಮ ಕೈಗೊಂಡು ಸರ್ಕಾರಕ್ಕೆ ಸೂಕ್ತ ವರದಿಯನ್ನು ಸಲ್ಲಿಸತಕ್ಕದ್ದು.

(4) ಆಯುಕ್ತರು, ಪದವಿ ಪೂರ್ವ ಶಿಕ್ಷಣ ಇಲಾಖೆ ಇವರು ಕಲಾ ಮತ್ತು ವಾಣಿಜ್ಯ ವಿಭಾಗದೊಂದಿಗೆ ಮಾತ್ರ ಸರ್ಕಾರಿ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸತಕ್ಕದ್ದು

(5) ಪ್ರತಿ ಸರ್ಕಾರಿ ಪದವಿ ಪೂರ್ವ ಕಾಲೇಜಿಗೆ ಸರ್ಕಾರದ ಆದೇಶ ಸಂಖ್ಯೆ. ಇಡಿ 143 ಯೋಯೋಕ 2007, ದಿನಾಂಕ:24-05-2007 ರಲ್ಲಿ ಸೂಚಿಸಿರುವಂತೆ ಕೆಳಕಂಡ ಮಾದರಿ ಬೋಧಕ/ಬೋಧಕೇತರ ಹುದ್ದೆಗಳನ್ನು ಮಂಜೂರು ಮಾಡಲಾಗಿದೆ.

| ಕ್ರಮ ಸಂಖ್ಯೆ | ಹುದ್ದೆ | ವೇತನ ಶ್ರೇಣಿ | ಹುದ್ದೆಗಳ ಸಂಖ್ಯೆ |
|---|---|---|---|
| 1 | ಪ್ರಾಂಶುಪಾಲರು | 8000-13440 | 01 |
| 2 | ಭಾಷಾ ಉಪನ್ಯಾಸಕರು | 6000-11200 | 02 |
| 3 | ಐಚ್ಛಿಕ ವಿಷಯ ಉಪನ್ಯಾಸಕರು | 6000-11200 | 05 |
| 4 | ದ್ವಿತೀಯ ದರ್ಜೆ ಸಹಾಯಕರು (ಸ್ವ.ಪ.ಪೂ.ಕಾ.) | 3000-5450 | 01 |
| 5 | ಗ್ರೂಪ್ - ಡಿ ಹುದ್ದೆ | 2500-3850 | 01 |

6) ಹೊಸದಾಗಿ ಸೃಜಿಸಲಾಗಿರುವ ಮೇಲ್ಕಂಡ ಹುದ್ದೆಗಳನ್ನು ಪ್ರಸ್ತುತ ನಿಯೋಜನೆಯ ಮೇಲೆ ಅಥವಾ ಮರು ಹಂಚಿಕೆ ಮೂಲಕ ಭರ್ತಿ ಮಾಡಿ ನಂತರ ನಿಯಮಾನುಸಾರ ನೇರ ನೇಮಕಾತಿ ಮಾಡುವ ಮೂಲಕ ಭರ್ತಿ ಮಾಡತಕ್ಕದ್ದು.

7) ಈ ಆದೇಶವನ್ನು. ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ. ಆಇ 511 ವೆಚ್ಚ-8/2007, ದಿನಾಂಕ: 19-05-2007, ಹಾಗೂ ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ. ಯೋಇ 48 ಜಶ 2007, ದಿನಾಂಕ:

15.05.2007 ರಲ್ಲಿ ನೀಡಿರುವ ಸಹಮತಿಯೊಂದಿಗೆ ಮತ್ತು ಶಿಕ್ಷಣ ಇಲಾಖೆಯ ಯೋಜನಾ ಶಾಖೆಯ ಆದೇಶ ಸಂಖ್ಯೆ ಇಡಿ 143 ಯೋಯೋಕ 2007, ದಿನಾಂಕ: 24-05-2007 ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

[ ಎಂ.ಎಂ.ಹಿರೇಮಠ ]
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ.

**ಪ್ರತಿಗಳು:-**

1) ಮಹಾಲೇಖಪಾಲರು, ಕರ್ನಾಟಕ - ಬೆಂಗಳೂರು.
2) ಆಯುಕ್ತರು, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12.
3) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.
4) ನಿರ್ದೇಶಕರು, ಪ್ರೌಢ ಶಿಕ್ಷಣ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
5) ಜಿಲ್ಲಾ ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಚಾಮರಾಜನಗರ ಜಿಲ್ಲೆ.
6) ಜಿಲ್ಲಾ ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಚಾಮರಾಜನಗರ ಜಿಲ್ಲೆ.
7) ಪದನಿಮಿತ್ತ ಸಹ ಕಾರ್ಯದರ್ಶಿಗಳು, ಯೋಜನಾ ಶಾಖೆ, ಶಿಕ್ಷಣ ಇಲಾಖೆ.
8) ನಿರ್ದೇಶಕರು, (ಜನಶಕ್ತಿ ಮತ್ತು ಉದ್ಯೋಗ) ಯೋಜನಾ ಇಲಾಖೆ.
9) ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
10) ಮುಖ್ಯ ಮಂತ್ರಿಯವರ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
11) ಮುಖ್ಯ ಮಂತ್ರಿಯವರ ಅಪರ ಕಾರ್ಯದರ್ಶಿ-1 ಯವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
12) ಜಿಲ್ಲಾ ಖಜಾನಾಧಿಕಾರಿಗಳು, ಚಾಮರಾಜನಗರ ಜಿಲ್ಲೆ.
13) ಸರ್ಕಾರದ ಅಧೀನ ಕಾರ್ಯದರ್ಶಿಗಳು, (ಆಯವ್ಯಯ) ವೆಚ್ಚ-8, ವಿಧಾನ ಸೌಧ, ಬೆಂಗಳೂರು.
14) ಶಿಕ್ಷಣ ಇಲಾಖೆಯ ಮಾಹಿತಿ ಕೇಂದ್ರದಲ್ಲಿ ಪ್ರಕಟಿಸುವ ಸಲುವಾಗಿ.(ಬಹುಮಹಡಿಗಳ ಕಟ್ಟಡ, 6ನೇ ಮಹಡಿ, ಬೆಂಗಳೂರು)
15) ಸರ್ಕಾರದ ಅಧೀನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ, (ಸೇವೆಗಳು)
16) ಸರ್ಕಾರದ ಅಧೀನ ಕಾರ್ಯದರ್ಶಿಗಳು, ಸಮನ್ವಯ ಶಾಖೆ, ಶಿಕ್ಷಣ ಇಲಾಖೆ.
17) ಕ್ಷೇತ್ರ ಶಿಕ್ಷಣಾಧಿಕಾರಿಗಳು, ಆಲೂರು/ಚಾಮರಾಜನಗರ.
18) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.